# ಶರ್ಲಿ ಹೇಳಿದ ಜಲಜಾ ಮೇಡಮ್‌ನ ಕತೆ

ನಮ್ಮದೇ ಕತೆಗಳನ್ನು ನಮ್ಮದೇ ಎಂದು ನೇರವಾಗಿ ಒಪ್ಪಿಕೊಂಡು ಹೇಳುವುದು ಮುಜುಗರದ ಕೆಲಸ. ಹೀಗಾಗಿ ಬೇರೆಯವರ ಕತೆಗಳನ್ನು ಕೆಲವರು ತಮ್ಮ ಕತೆ ಅನ್ನುವ ಹಾಗೆ ಹೇಳುವ ಮೋಸಗಾರರಾಗುತ್ತಾರೆ. ಇನ್ನು ಕೆಲವರು ತಮ್ಮದೇ ಕತೆಯನ್ನು ಬೇರೆಯವರ ಕತೆ ಮಾಡಿ ಹೇಳುತ್ತಾರೆ. ಜಲಜಾ ಮೇಡಮ್ ಬಗ್ಗೆ ಶರ್ಲಿ ಹೇಳಿದಾಗ ಯಾಕೋ ಹೀಗನಿಸಿತು. ನಾನು ಈ ಕತೆ ಹೇಳುತ್ತಿರುವಾಗಲೂ ನಿಮಗೆ ಹೀಗೇ ಅನ್ನಿಸಬಹುದು. ನಮ್ಮದೇ ಕತೆ ಹೇಳುವುದಕ್ಕಿಂತ ಅವರು ಹೇಳಿದ್ದು, ಇವರು ಹೇಳಿದ್ದು ಎಂದು ಹೇಳುವುದು ಸುಲಭವಲ್ಲವೇ?

★★★

ಇದು ನಾನು ಪ್ರೈವೇಟ್ ಕಂಪನಿಯೊಂದರಲ್ಲಿ ಕೆಲಸ ಮಾಡುತ್ತಿದ್ದಾಗ ಕೇಳಿದ ಕತೆ. ಈ ಕತೆ ಹೇಳಿದವರು ನಮ್ಮ ಕಂಪನಿಯಲ್ಲಿ ಸೆಕ್ರೆಟರಿಯಾಗಿದ್ದ ಶರ್ಲಿ. ಶರ್ಲಿ ತುಂಬಾ ಸುಂದರವಾದ ಹೆಂಗಸು. ಮದುವೆಯಾಗಿ ಒಬ್ಬ ಮಗನಿದ್ದ. ಹೆಚ್ಚು ಮಾತು ಆಡುತ್ತಿರಲಿಲ್ಲ. ತಾನಾಯಿತು ತನ್ನ ಕೆಲಸವಾಯಿತು ಅನ್ನುವ ಹಾಗೆ ಇರುವವರು. ಆದರೆ, ನನ್ನ ಜೊತೆ ಆತ್ಮೀಯವಾಗಿರಲು ಹೆಚ್ಚು ಸಮಯ ತೆಗೆದುಕೊಳ್ಳಲಿಲ್ಲ. ಟೀ ಬ್ರೇಕ್‌ನಲ್ಲಿ ನಾನು ಮತ್ತು ಅವರು ಮಾತನಾಡದ ವಿಷಯವಿಲ್ಲ. ಬಾಸ್ ಇಲ್ಲದೇ ಇರುವ ದಿನಗಳಲ್ಲಂತೂ ನಾವು ಬಹಳ ಆತ್ಮೀಯವಾಗಿ ಮಾತನಾಡುತ್ತಿದ್ದೆವು. ನಾನು ವಯಸ್ಸಿನಲ್ಲಿ ಸಣ್ಣವನು, ಗಂಡಸು, ಈ ರೀತಿಯ ಮುಜುಗರಗಳನ್ನು ಅವರು ಬಹಳ ಬೇಗ ದಾಟಿಬಿಟ್ಟರು. ಹೀಗೆ ಒಂದು ದಿನ ಇಬ್ಬರೂ ಫ್ರೀಯಾಗಿ ಇರುವಾಗ ಅದು ಹೇಗೋ ಕೆಲಸದ ಸ್ಥಳದಲ್ಲಿ ಹೆಣ್ಣುಮಕ್ಕಳ ಲೈಂಗಿಕ ಶೋಷಣೆಯ ವಿಷಯದ ಕಡೆ ಮಾತುಕತೆ ತಿರುಗಿತು. "ನೀವು ಇಷ್ಟು ಸುಂದರವಾಗಿದ್ದೀರಿ, ನಿಮಗೆ ಈ ರೀತಿ ಮುಜುಗರದ ಸಂದರ್ಭ ಎದುರಾಗಿಲ್ಲವೇ?" ಎಂದು ಕೇಳಿಬಿಟ್ಟೆ. ಆಗಿನ್ನೂ ಈಗಿನ ಹಾಗೆ ಈ ವಿಷಯದ ಬಗ್ಗೆ ಹೆಚ್ಚಿನ ಅರಿವು ಇರಲಿಲ್ಲ. ಕೇಳಿದ ತಕ್ಷಣ ಹಾಗೆ ಕೇಳಿದ್ದು ಅತಿಯಾಯಿತು ಎಂದು ಅನ್ನಿಸಿತು. ಆದರೆ, ಶರ್ಲಿ ಜೋರಾಗಿ ನಕ್ಕರು. ''ನಿನಗೆ ಒಂದು ಕತೆಯನ್ನು ಹೇಳುತ್ತೀನಿ. ಇದು ಕತೆಯಲ್ಲ. ನಿಜವಾಗಿ ನಡೆದಿದ್ದು. ನಮಗೆ ಆತ್ಮೀಯರಾದವರ ಜೀವನದಲ್ಲಿ ನಡೆದಿದ್ದು. ಇದನ್ನು ನಮ್ಮ ಅಮ್ಮ ನಾನು ಕೆಲಸಕ್ಕೆ ಸೇರಿದ ಹೊಸತರಲ್ಲಿ

